ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ**

**ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 1970/2022**

**ಚಾ.ಸಾ. - 1**
**ಪ್ರಾ.ಸಾ. - 1**

**ಸಾಕ್ಷಿದಾರರ ಹೆಸರು** ಃ ಬಸವರಾಜ ಎಸ್ ಮುಡಸಿ

**ಸಾಕ್ಷಿದಾರರ ವಯಸ್ಸು** ಃ 37 ವರ್ಷ

**ಸಾಕ್ಷಿದಾರರ ಉದ್ಯೋಗ**ಃ ಅಬಕಾರಿ ನೀರಿಕ್ಷಕರು

**ಸಾಕ್ಷಿದಾರರ ವಿಳಾಸ** ಃ ಬೈಲಹೊಂಗಲ

**ಪ್ರಮಾಣ ವಚನ ಮಾಡಿದ ದಿನಾಂಕ ಃ 23.09.2024.**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದಃ**

ದಿಃ **27.09.2022** ರಂದು ಸಿಬ್ಬಂಧಿಯವರೊಂದಿಗೆ ಬೆಳವಡಿಯಲ್ಲಿ ಗಸ್ತು ಮಾಡುತ್ತಿದ್ದಾಗ, ದೂರವಾಣಿ ಮೂಲಕ ಸೋಮೇಶ್ವರ ಸಕ್ಕರೆ ಕಾರ್ಖಾನೆ ಮುಂದೆ ಶಂಕಿತ ವ್ಯಕ್ತಿ ಅಕ್ರಮವಾಗಿ ಗಾಂಜಾ ಮಾರುತ್ತಿದ್ದಾನೆ ಎಂದು ಮಾಹಿತಿ ಬಂದಿರುತ್ತದೆ. ತಕ್ಷಣವೇ ಸದರಿ ಮಾಹಿತಿಯನ್ನು ಇಳಿಸಿಕೊಂಡು, ಮೇಲಾಧಿಕಾರಿಗಳಾದ ಆರ್ ಎಸ್ ಮುದಿಗೌಡರ ರವರಿಗೆ ದೂರವಾಣಿ ಕರೆ ಮೂಲಕ ತಿಳಿಸಿರುತ್ತೇನೆ. ಪಂಚರನ್ನು ಕರೆದುಕೊಂಡು ಬರಲು ನಮ್ಮ ಅಬಕಾರಿ ಸಿಬ್ಬಂಧಿಯವಾರಾದ ಚಾಸಾ **7** ರವರರಿಗೆ ಕಳುಹಿಸಿರುತ್ತೇನೆ. ಪಂಚರು ಸಾಯಂಕಾಲ **04.30** ನಿಮಿಷಕ್ಕೆ ನನ್ನ ಬಳಿ ಬರುತ್ತಾರೆ. ಸದರಿ ದಾಳಿ ಬಗ್ಗೆ ಪಂಚರಿಗೆ ತಿಳಿಸಿ ಸ್ಥಳಿಯರು ಒಪ್ಪದಿದ್ದಾಗ ನೀವೇ ಪಂಚರಾಗಬೇಕು ಎಂದು ನೋಟಿಸ ನೀಡಿರುತ್ತೇನೆ. ಸದರಿ ಪಂಚರು ಚಾಸಾ **2** ಮತ್ತು **3** ರವರಾಗಿರುತ್ತಾರೆ. ಸದರಿ ಶಂಕಿತ ಆರೋಪಿಯ ಅಂಗಶೋಧನೆಗೆ ಪತ್ರಾಂಕಿತ ಅಧಿಕಾರಿಗಳ ಅವಶ್ಯಕತೆ ಇದ್ದ ಕಾರಣ ಚಾಸಾ **4** ರವರಿಗೆ ಕರೆ ಮಾಡಿದಾಗ ಅವರು ಕೂಡ ಕೆಂಗಣ್ಣೂರು ಗ್ರಾಮದಲ್ಲಿ ಗಸ್ತು ತಿರುಗುತ್ತಿರುವುದಾಗಿ ಸ್ಥಳಕ್ಕೆ ಬರುವುದಾಗಿ ತಿಳಿಸಿರುತ್ತಾರೆ. ಸ್ವಲ್ಪ ಸಮಯದ ನಂತರ ಸದರಿ ಅಧಿಕಾರಿಗಳು ನಾನು ಇರುವ ಸ್ಥಳಕ್ಕೆ ಬಂದಿರುತ್ತಾರೆ. ಶಂಕಿತ ವ್ಯಕ್ತಿಯ ಅಂಗ ಶೋದನೆಗಾಗಿ ಪತ್ರಾಂಕಿನ ಅಧಿಕಾರಿಗಳಾಗಿ ಭಾಗವಹಿಸಲು ನೋಟಿಸ ನೀಡಿರುತ್ತೇನೆ. ಸದರಿ ನೋಟಿಸಗೆ ಅವರು ಒಪ್ಪಿ ಗೆ ಸೂಚಿಸಿರುತ್ತಾರೆ. ಗಾಂಜಾ ತೂಕ ಮಾಡಲು ಕಿರಾಣಿ ಅಂಗಡಿಯಿಂದ ಡಿಜಿಟಲ್ ತಕ್ಕಡಿಯನ್ನು ಸಿಬ್ಬಂಧಿಗಳ ಸಹಾಯದಿಂದ ತರಿಸಿರುತ್ತೇನೆ. ಎಲ್ಲರೂ ಸೇರಿಕೊಂಡು ಬೆಳವಡಿಯಿಂದ ಬಾತ್ಮಿ ಸ್ಥಳಕ್ಕೆ ಹೋಗಿರುತ್ತೇವೆ. ಸ್ವಲ್ಪ ದೂರದಿಂದ ನೋಡಲಾಗಿ ಒಬ್ಬ ಶಂಕಿತ ವ್ಯಕ್ತಿಯು ಕಪ್ಪು ಬಣ್ಣದ ಪ್ಲಾಸ್ಟೀಕ ಚೀಲವನ್ನು ಹಿಡಿದುಕೊಂಡು ನಿಂತಿರುವುದು ತಿಳಿದುಬಂತು. ತಕ್ಷಣವೇ ನಾವೇಲ್ಲರೂ ಶಂಕಿನ ವ್ಯಕ್ತಿಯ ಬಳಿ ಹೊದೆವು. ಸರ್ಕಾರಿ ವಾಹನ ಹಾಗೂ ನಮ್ಮ ಸಮವಸ್ತ್ರವನ್ನು ನೋಡಿ ಶಂಕಿನ ಆರೋಪಿ ಓಡಿ ಹೋಗಲು ಪ್ರಯತ್ನ ಪಟ್ಟನು. ಅಷ್ಟರಲ್ಲಿ ನಾವೇಲ್ಲರೂ ಸೇರಿ ಸುತ್ತುವರೆದು ಅವನನ್ನು ಹಿಡಿದುಕೊಂಡೆವು. ಸದರಿ ವ್ಯಕ್ತಿಯ ಹೆಸರು ಕೇಳಲಾಗಿ ಆತನು ತನ್ನ ಹೆಸರು ಮಹಾಂತೇಶ ಯಲ್ಲಪ್ಪ ಬಾಗೇವಾಡಿ ವಯಸ್ಸು **47** ಸಾಃ ಬೆಳವಡಿ

ಎಂದು ತಿಳಿಸಿರುತ್ತಾರೆ. ಸದರಿ ಪ್ಲಾಸ್ಟಿಕ ಚೀಲವನ್ನು ಶೋಧಿಸಲು ಮಾನ್ಯ ನ್ಯಾಯಾಲಯದಿಂದ ಸರ್ಚ ವಾರಂಟ್ ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದ ಕಾರಣ ಎನ್ ಡಿ ಪಿ ಎಸ್ ಕಾಯ್ದೆ**1985** ಕಲಂ **42** ರ ಪ್ರಕಾರ ಬದ್ದವಾದ ಅಧಿಕಾರವನ್ನು ಚಲಾಯಿಸಿ ಪಂಚರ ಹಾಗೂ ಪತ್ರಾಂಕಿತ ಅಧಿಕಾರಿಗಳ ಸಮಕ್ಷಮದಲ್ಲಿ ಶೋಧನ ಸಮೂಚಿತ ವರದಿಯನ್ನು ತಯಾರಿಸಿರುತ್ತೇನೆ . ಆರೋಪಿತನ ಅಂಗಶೋಧನೆ ಮಾಡುವ ಮುಂಚೆ ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ನಮ್ಮ ಹಾಗೂ ಸಿಬ್ಬಂಧಿಗಳ ಬಳಿ ಯಾವುದೇ ಎನ್ ಡಿ ಪಿ ಎಸ್ ಪದಾರ್ಥಗಳು ಇಲ್ಲದೇ ಇರುವುದನ್ನು ಖಚಿತಪಡಿಸಿಕೊಂಡು ಸಿಬ್ಬಂಧಿಗಳು ಹಾಗೂ ನಾವು ಸೇರಿಕೊಂಡು ಸದರಿ ಪ್ಲಾಸ್ಟಿಕ ಚೀಲವನ್ನು ಪರಿಶೀಲಿಸಲಾಗಿ ಎಲೆ ಹೂ ಮತ್ತು ಬೀಜದಿಂದ ಕೂಡಿದ ಹಾಗೂ ಒಣಗಿದ ಗಾಂಜಾ ಕಂಡು ಬಂದಿತ್ತು .ಆರೋಪಿತನನ್ನು ವಿಚಾರಿಸಲಾಗಿ ಸ್ವಂತ ಪಾಯಿದೆಗೊಸ್ಸಕರ ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ .ವಾಹನದಲ್ಲಿ ತಂದಿದ್ದ ಡಿಜಿಟಲ್ ತಕ್ಕಡಿಯ ಸಹಾಯದಿಂದ ಸದರಿ ಗಾಂಜಾವನ್ನು ಪ್ಲಾಸ್ಟಿಕ ಸಮೇತ ತೂಕ ಮಾಡಿ ನೋಡಲಾಗಿ **300** ಗ್ರಾಂ ಒಣಗಿದ ಗಾಂಜಾ ಕಂಡು ಬಂತು. ನಂತರ ರಾಸಾಯನಿಕ ಪರೀಕ್ಷೆಗಾಗಿ ನ್ಯಾಯಾಲಯದ ಮುಂದೆ ತೆಗೆಯಬೇಕಾಗಿರುವ ಕಾರಣ ಸದರಿ ಮುದ್ದೆ ಮಾಲನ್ನು ಬಿಳಿ ಬಟ್ಟೆಯಿಂದ ಮುಚ್ಚಿ  ಬಿಳಿ ದಾರದಿಂದ ಬಿಗಿದು, ಅರಗು ಕಾಯಿಸಿ ಹಾಕಿ ಕಚೇರಿ ಸೀಲ್ ನಂಬರ **585** ರಿಂದ ಸೀಲ್ ಮಾಡಿ ಅವುಗಳಿಗೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು . ನಂತರ ಸದರಿ ಕೃತ್ಯ ನಡೆದ ಸ್ಥಳದ ಚೆಕಬಂಧಿ ಪೂರ್ವಕ್ಕೆ ಸೋಮೇಶ್ವರ ಸಕ್ಕರೆ ಕಾರ್ಖಾನೆಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ಖುಲ್ಲಾ ಜಾಗ, ಉತ್ತರಕ್ಕೆ ಬೆಳವಡಿಗೆ ಹೋಗುವ ರಸ್ತೆ , ದಕ್ಷಿಣಕ್ಕೆ ಸಿದ್ದ ಸಮುದ್ರಕ್ಕೆ ಹೋಗುವ ರಸ್ತೆ. ಸದರಿ ಸ್ಥಳದಲ್ಲಿ **05-00** ರಿಂದ **06.00** ಗಂಟೆವರೆಗೆ ಪಂಚನಾಮೆ ಜರುಗಿಸಿರುತ್ತೇವೆ. ಕೃತ್ಯದ ಬಗ್ಗೆ **2** ಛಾಯಾಚಿತ್ರಗಳನ್ನು ತಗೆದಿರುತ್ತೇವೆ. ಮುದ್ದೆ ಮಾಲನ್ನು ವಶಪಡಿಸಿಕೊಂಡು ಕೊಂಡು ಠಾಣೆಗೆ ಬಂದು ಗುನ್ನೆ ದಾಖಲಿಸಿರುತ್ತೇನೆ . ದಿನಾಂಕ **28.09.2022** ರಂದು ಸದರಿ ಜಪ್ತಾದ ಮುದ್ದೆ ಮಾಲು ಹಾಗೂ ಪ್ರಕರಣದ ಕುರಿತು ಮೇಲಾಧಿಕರಿಗಳಿಗೆ ವರದಿಯನ್ನು ನೀಡಿರುತ್ತೇನೆ . ಗುನ್ನೆ ದಾಖಲಿಸಿಕೊಂಡಿರುತ್ತೇನೆ. ಜಪ್ತಾದ ಮಾಲನ್ನು ಕಚೇರಿಯ ತಾಬಾದಲ್ಲಿ ಇಟ್ಟುಕೊಳ್ಳಲು ನ್ಯಾಯಾಲದಿಂದ ಅನುಮತಿ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಶಾನೆ ಪಿ **1** ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ **1**ಎ ಎಂದು ಗುರುತಿಸಲಾಯಿತು . ಸಾಕ್ಷಿಯು ಪಂಚನಾಮೆಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಶಾನೆ ಪಿ **2** ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ **2**ಎ ಎಂದು ಗುರುತಿಸಲಾಯಿತು . **2** ಪೋಟೋಗಳನ್ನು ನೋಡಿ ಗುರುತಿಸಿದ್ದು,ಅವುಗಳನ್ನು ನಿಶಾನೆ ಪಿ **3** ಮತ್ತು **4** ಎಂದು ಗುರುತಿಸಲಾಯಿತು.  ಸಾಕ್ಷಿ ಅನುಮತಿ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ **5** ಎಂದು  ಸಾಕ್ಷಿಯ ಸಹಿಯನ್ನು ನಿಶಾನೆ ಪಿ **5** ಎ ಎಂದು ಗುರುತಿಸಲಾಯಿತು .

2. ದಿನಾಂಕ 03.10.2022 ರಂದು ನ್ಯಾಯಾಲಯಕ್ಕೆ ಜಪ್ತಾದ ಮುದ್ದೆ ಮಾಲನ್ನು ಇನವೆಂಟರಿ ಮಾಡುವ ಕುರಿತು ಹಾಗೂ ರಾಸಾಯನಿಕ ಸ್ಯಾಂಪಲಗಾಗಿ ತೆಗೆಯಲು ವಿನಂತಿ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 6 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 6ಎ ಎಂದು ಗುರುತಿಸಲಾಯಿತು. ಇನವೆಂಟರಿ ಕುರಿತಾಗಿ ನ್ಯಾಯಾಧೀಶರಿಂದ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಶಾನೆ ಪಿ 7 ಎಂದು ಗುರುತಿಸಲಾಯಿತು. ನ್ಯಾಯಧೀಶರ ಸಮಕ್ಷಮ 50ಗ್ರಾಂ ಒಣಗಿದ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ

ಪಡೆದುಕೊಳ್ಳಲಾಯಿತು. ಸದರಿ ಸಮಯದಲ್ಲಿ ಇನವೆಂಟರಿ ಮಾಡಿದ ಕುರಿತು ಹಾಗೂ ರಾಸಾಯನಿಕ ಪರೀಕ್ಷೆಗಾಗಿ ಸ್ಯಾಂಪಲ ತೆಗೆದಕ್ಕೆ ಸಂಬಂಧಿಸಿದಂತೆ ಛಾಯಚಿತ್ರಗಳನ್ನು ತೆಗೆಯಲಾಯಿತು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ 8 ಮತ್ತು 9 ಎಂದು ಗುರುತಿಸಲಾಯಿತು. ಉಳಿದ ಮುದ್ದೆ ಮಾಲನ್ನು ನ್ಯಾಯಾಧೀಶರ ಸಮಕ್ಷಮ ಪುನಃ ಶೀಲ್ ಮಾಡಿ ಮಾದರಿ ಚೀಟಿಗಳನ್ನು ಅಂಟಿಸಲಾಯಿತು. ಪ್ರ ವ ವ ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 10 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಶಾನೆ ಪಿ 10ಎ ಎಂದು ಗುರುತಿಸಲಾಯಿತು. ಪತ್ರಾಂಕಿತ ಅಧಿಕಾರಿಗಳಿಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 11 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಶಾನೆ ಪಿ 11 ಎ ಎಂದು ಗುರುತಿಸಲಾಯಿತು. ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ 12 ರವರಿಗೆ ವಹಿಸಿ ದಾಖಲಾತಿಗಳನ್ನು ಹಸ್ತಾಂತರಿಸಿರುತ್ತೇನೆ. ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿದ ಮುದ್ದೆ ಮಾಲನ್ನು ತೆರೆದ ನ್ಯಾಯಾಲಯದಲ್ಲಿ ಒಡೆಯಲಾಯಿತು. ಸಾಕ್ಷಿ ಮುದ್ದೆ ಮಾಲನ್ನು ನೋಡಿ ಗುರುತಿಸುವರು ಅದನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಆರೋಪಿಯನ್ನು ಗುರುತಿಸುವರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಸಮಯ ಕೋರಿದ್ದು, ನಿರಾಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಸಹಿ/-

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ